**2019–20ನೇ ಶೈಕ್ಷಣಿಕ ಸಾಲಿನಲ್ಲಿ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಸಂಬಂಧ ಅನುಸರಿಸಬೇಕಾದ ವೇಳಾಪಟ್ಟಿ**

| ಕ್ರ | ಘಟನಾವಳಿಗಳ ವಿವರ | ದಿನಾಂಕ |
|---|---|---|
| 1 | ಅರ್ಹ ಟ್ರಸ್ಟ್ / ಸಂಸ್ಥೆಯ ಆಡಳಿತ ಮಂಡಳಿಗಳು ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅರ್ಜಿ ಶುಲ್ಕ ರೂ. 50,000/- ದೊಂದಿಗೆ ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಪ್ರಾರಂಭಿಕ ದಿನಾಂಕ (Form – I ರಲ್ಲಿ) – (ನಿಯಮ– 4 ರಂತೆ).<br>ಅಂತಿಮ ದಿನಾಂಕ | 22–02–2019<br>11–03–2019 |
| 2 | ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸಿರುವ ಹಾಗೂ ರಿಜಿಸ್ಟರ್‌ನಲ್ಲಿ ನೋಂದಾಯಿಸಲ್ಪಟ್ಟ ಟ್ರಸ್ಟ್ / ಸೊಸೈಟಿಗಳಿಗೆ ನಿರ್ದೇಶನಾಲಯದಿಂದ Letter of intent ನೀಡಲು ಕೊನೆಯ ದಿನಾಂಕ | 18–03–2019 |
| 3 | ನಿರ್ದೇಶನಾಲಯವು ನೀಡಿರುವ Letter of intentಗೆ ಆಡಳಿತ ಮಂಡಳಿಯವರು 2019–20ನೇ ಶೈಕ್ಷಣಿಕ ಸಾಲಿನಲ್ಲಿಯೇ ಖಾಸಗಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿ ನಿಯಮ – 4ರಂತೆ ಸಿದ್ಧತೆ ಮಾಡಿಕೊಂಡಿರುವ ಬಗ್ಗೆ ಅಗತ್ಯ ದಾಖಲೆಗಳೊಂದಿಗೆ ನಿಗದಿತ ನಮೂನೆಯೊಂದಿಗೆ ಪ್ರಸ್ತಾವನೆಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸುವ ಕೊನೆಯ ದಿನಾಂಕ | 25–03–2019 |
| 4 | ಜಿಲ್ಲಾ ತಪಾಸಣಾ ಸಮಿತಿಯು ಉದ್ದೇಶಿತ ಕಾಲೇಜುಗಳ ಸ್ಥಳ ಪರಿಶೀಲನೆ ನಡೆಸಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ವರದಿ ಸಲ್ಲಿಸುವ ಕೊನೆಯ ದಿನಾಂಕ<br>1) ನಿರ್ದೇಶನ ನೀಡಿದ 15 ದಿನಗಳ ಒಳಗಾಗಿ ಸ್ಥಳ ಪರಿಶೀಲನೆ ನಡೆಸಿ, ತಪಾಸಣಾ ಸಮಿತಿಯು ವರದಿಯನ್ನು ದಾಖಲೆಗಳೊಂದಿಗೆ ಜಿಲ್ಲಾ ಉಪ ನಿರ್ದೇಶಕರಿಗೆ ಸಲ್ಲಿಸುವುದು.<br>2) ತಪಾಸಣಾ ಸಮಿತಿಯು ನೀಡುವ ವರದಿಯನ್ನು ಜಿಲ್ಲಾ ಉಪ ನಿರ್ದೇಶಕರು ಮುಂದಿನ 05 ದಿನಗಳ ಒಳಗಾಗಿ ನಿರ್ದೇಶನಾಲಯಕ್ಕೆ ತಲುಪಿಸುವುದು. | 10–04–2019 |

ಜಂಟಿ ನಿರ್ದೇಶಕರು(ಮಾ&ಅ)(ಪ್ರ)
ಪದವಿ ಪೂರ್ವ ಶಿಕ್ಷಣ ಇಲಾಖೆ.

# ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರ, ಬೆಂಗಳೂರು-12

ಸಂಖ್ಯೆ: ಪಪೂಶಿ/ಸಿಬ್ಬಂದಿ-3/ಹೊಕಾಅ/2015-16(ಸಂಪುಟ-2) ದಿನಾಂಕ:23-02-2019

## ಸ್ಥಾಯಿ ಸೂಚನೆಗಳು:

2019-20ನೇ ಶೈಕ್ಷಣಿಕ ಸಾಲಿಗೆ ಹೊಸದಾಗಿ ಖಾಸಗಿ ಶಾಶ್ವತ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಶಿಕ್ಷಣ ಸಂಸ್ಥೆ/ ಟ್ರಸ್ಟ್‌ಗಳು ಆನ್‌ಲೈನ್ ಮೂಲಕ ಅರ್ಜಿ ಶುಲ್ಕ ರೂ. 50,000/- ದೊಂದಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದೆ. ಈಗಾಗಲೇ 2017-18 ಮತ್ತು 2018-19ನೇ ಶೈಕ್ಷಣಿಕ ಸಾಲಿನಲ್ಲಿ ಅರ್ಜಿ ಸಲ್ಲಿಸಿ ಕಾಲೇಜು ಮಂಜೂರಾತಿ ಆದೇಶವನ್ನು ಪಡೆಯದೇ ಇರುವ ಖಾಸಗಿ ಶಿಕ್ಷಣ ಸಂಸ್ಥೆಗಳು / ಟ್ರಸ್ಟ್‌ಗಳು ಪ್ರಸ್ತುತ ಪರಿಷ್ಕೃತ ದರದ ವ್ಯತ್ಯಾಸದ ಮೊತ್ತವನ್ನು ಪಾವತಿಸಿದ ಚಲನ್‌ನೊಂದಿಗೆ 2019-20ನೇ ಶೈಕ್ಷಣಿಕ ಸಾಲಿನಲ್ಲಿ ಮತ್ತೊಮ್ಮೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

**ಅರ್ಜಿಯನ್ನು ಆನ್ ಲೈನ್‌ನಲ್ಲಿ ಭರ್ತಿಮಾಡಲು ಅನುಸರಿಸಬೇಕಾದ ಕಾರ್ಯ ವಿಧಾನಗಳು.**

1. ಉದ್ದೇಶಿತ ಪದವಿ ಪೂರ್ವ ಕಾಲೇಜಿನ ಹೆಸರು ಮತ್ತು ಪೂರ್ಣ ಅಂಚೆ ವಿಳಾಸ, ಪಿನ್‌ಕೋಡ್‌ನೊಂದಿಗೆ.
2. ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಶಿಕ್ಷಣ ಸಂಸ್ಥೆ/ ಟ್ರಸ್ಟ್ ಹೆಸರು ಮತ್ತು ಪೂರ್ಣ ಅಂಚೆ ವಿಳಾಸ ಪಿನ್‌ಕೋಡ್‌ನೊಂದಿಗೆ. (Enclose Copy of the certificate of Registration, Copy of the Memorandum of Association etc., of the society, Trust deed etc. see Section 2(17)
3. ಪ್ರಸ್ತಾಪಿತ ಪದವಿ ಪೂರ್ವ ಕಾಲೇಜು ಪ್ರಾರಂಭಿಸಲು ಹೊಂದಿರುವ ಧ್ಯೇಯೋದ್ದೇಶಗಳು (MAX 450 Characters) ಏನು ?
4. ಪ್ರಸ್ತಾಪಿತ ಪದವಿ ಪೂರ್ವ ಕಾಲೇಜು ಪ್ರಾರಂಭಿಸಲು ನಿಗಧಿಪಡಿಸಿಕೊಂಡಿರುವ ವರ್ಷ. (ಉದಾ: 2019-20)
5. ಪ್ರಸ್ತಾಪಿತ ಪದವಿ ಪೂರ್ವ ಕಾಲೇಜು ಪ್ರಾರಂಭಿಸಲು ಬಯಸುತ್ತಿರುವ ವಿವರ. (ಬಾಲಕರ/ಬಾಲಕಿಯರ /ಸಹಶಿಕ್ಷಣ/ಸ್ವತಂತ್ರ/ಸಂಯುಕ್ತ). ಭರ್ತಿ ಮಾಡುವುದು ಕಡ್ಡಾಯ.
6. ಪ್ರಸ್ತಾಪಿತ ಪದವಿ ಪೂರ್ವ ಕಾಲೇಜು ಪ್ರಾರಂಭಿಸಲು ಉದ್ದೇಶಿಸಿರುವ ಶಿಕ್ಷಣ ಸಂಸ್ಥೆ/ ಟ್ರಸ್ಟ್ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ನಡೆಸಲಾಗುತ್ತಿರುವ ಶಿಕ್ಷಣ ಸಂಸ್ಥೆಗಳ ವಿವರ. (MAX. 450 Characters)
7. ಪ್ರಸ್ತಾಪಿತ ಪದವಿ ಪೂರ್ವ ಕಾಲೇಜು ಪ್ರಾರಂಭಿಸಲು ಉದ್ದೇಶಿಸಿರುವ ಸ್ಥಳವು ಸಾರ್ವಜನಿಕರಿಗೆ ಅವಶ್ಯವಿರುವ ಶೈಕ್ಷಣಿಕ ಸೌಲಭ್ಯಗಳನ್ನು ನೀಡುವ ಬಗ್ಗೆ ವಿವರಗಳು:

ಎ). ಜನಸಂಖ್ಯೆ (ಜನಗಣತಿ ವರದಿ ಆಧಾರಿತ)

ಬಿ). ಶೇಕಡಾವಾರು ಸಾಕ್ಷರತೆ.

ಸಿ). ಪ್ರಸ್ತಾಪಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸ್ಥಳದ ಸುತ್ತ ಮುತ್ತಲಿನ ಶೈಕ್ಷಣಿಕ ಸಂಸ್ಥೆಗಳ ವಿವರ:

1. ಸ್ಥಳದ ಸುತ್ತ ಮುತ್ತಲಿನ ಪದವಿ ಪೂರ್ವ ಕಾಲೇಜುಗಳ ವಿವರ ಹಾಗೂ ದೂರ.

| | ಕಾಲೇಜು ಸಂಕೇತ ಸಂಖ್ಯೆ | ದೂರ(ಕಿ.ಮೀ.ಗಳಲ್ಲಿ) |
|---|---|---|
| ಕಾಲೇಜು 1: | | |
| ಕಾಲೇಜು 2: | | |
| ಕಾಲೇಜು 3: | | |
| ಕಾಲೇಜು 4: | | |

ಡಿ). ಉದ್ದೇಶಿತ ಸ್ಥಳದ ಸುತ್ತ ಮುತ್ತ ಇರುವ ಪ್ರೌಢಶಾಲೆಗಳ(ಫೀಡರ್ ಸಂಸ್ಥೆಗಳು) ಡೈಸ್‌ಕೋಡ್ ಹಾಗೂ ದೂರದ ವಿವರ:

| | ಶಾಲಾ ಡೈಸ್ ಸಂಖ್ಯೆ | ದೂರ(ಕಿ.ಮೀ.ಗಳಲ್ಲಿ) |
|---|---|---|
| ಪ್ರೌಢಶಾಲೆ 1: | | |
| ಪ್ರೌಢಶಾಲೆ 2: | | |
| ಪ್ರೌಢಶಾಲೆ 3: | | |
| ಪ್ರೌಢಶಾಲೆ 4: | | |

ಇ) ಸ್ಥಳೀಯ ನಿವಾಸಿಗಳ ಹಾಗೂ ಅವರ ಹಿಂದುಳಿಕೆಯ ವಿವರಗಳು (ನಿಖರವಾದ ಅಂಕಿ ಅಂಶಗಳೊಂದಿಗೆ):

1. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ.
2. ಬಾಲಕಿಯರು, ಅಂಗವಿಕಲ ಮಕ್ಕಳು.
3. ಅಲ್ಪಸಂಖ್ಯಾತ ಸಮುದಾಯ.

8. ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಭರ್ತಿಮಾಡುವುದು:

ಎ) ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 136 ಟಿಪಿಯು 1999 ದಿನಾಂಕ 09-10-2006 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 107 ಟಿಪಿಯು 2017 ದಿನಾಂಕ 27-09-2018 ರ ಪ್ರಕಾರ ಇರಬೇಕಾದ ನಿಗದಿತ ಮೂಲಭೂತ ಸೌಲಭ್ಯಗಳು ನಿಗದಿಪಡಿಸಿರುವಂತೆ ಮೂಲಭೂತ ಸೌಲಭ್ಯಗಳು, ಪಾಠೋಪಕರಣ, ಪೀಠೋಪಕರಣ, ಇನ್ನಿತರೆ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಪ್ರಸ್ತುತ ಮಾರುಕಟ್ಟೆ ದರದಂತೆ ತಗಲುವ ಅಂದಾಜು ವೆಚ್ಚ.

ಬಿ) ಶಿಕ್ಷಣ ಸಂಸ್ಥೆ/ ಟ್ರಸ್ಟ್ ಇತ್ತೀಚಿನವರೆಗೆ ಚಾರ್ಟರ್ಡ್ ಅಕೌಂಟೆಂಟ್ ರಿಂದ ಆಡಿಟ್ ಮಾಡಿದ ದೃಢೀಕೃತ ಆಯವ್ಯಯ ವಿವರ, ಆಯವ್ಯಯ ಹೇಳಿಕೆ ಸೆಕ್ಷನ್ 2(17)ನ್ನು ನೋಡಿ.

1. ಶಿಕ್ಷಣ ಸಂಸ್ಥೆ/ ಟ್ರಸ್ಟ್ ಹೊಂದಿರುವ ಸ್ಥಿರಾಸ್ತಿ ಮತ್ತು ಚರಾಸ್ತಿ ವಿವರ.

ಸಿ) ಶಿಕ್ಷಣ ಸಂಸ್ಥೆ/ ಟ್ರಸ್ಟ್ ಬ್ಯಾಂಕ್ ಖಾತೆಯಲ್ಲಿರುವ ನಗದು ಹಣದ ಬಗ್ಗೆ ದೃಢೀಕೃತ ಪ್ರತಿ.

ಡಿ) ಕಟ್ಟಡ ನಿರ್ಮಾಣ, ಆಟದ ಮೈದಾನ, ಇತ್ಯಾದಿಗಳನ್ನು ಒದಗಿಸಲು ಶಿಕ್ಷಣ ಸಂಸ್ಥೆ/ ಟ್ರಸ್ಟ್ ಹೆಸರಿನಲ್ಲಿರುವ ನಿವೇಶನದ ವಿಸ್ತೀರ್ಣದ ಬಗ್ಗೆ ಮೂಲ ದಾಖಲೆಗಳ ಛಾಯಾ ಪ್ರತಿಗಳು.(Title Deeds)

ಇ) ಪದವಿ ಪೂರ್ವ ಶಿಕ್ಷಣ ಇಲಾಖೆ ನಿಯಮಗಳು ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 136 ಟಿಪಿಯು 1999 ದಿನಾಂಕ 09-10-2006 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 107 ಟಿಪಿಯು 2017 ದಿನಾಂಕ 27-09-2018 ಕಟ್ಟಡದ ನೀಲಿ ನಕ್ಷೆ.

ಎಫ್) ಶಿಕ್ಷಣ ಸಂಸ್ಥೆ/ ಟ್ರಸ್ಟ್ ನಡೆಸುತ್ತಿರುವ ಇತರೆ ಶಿಕ್ಷಣ ಸಂಸ್ಥೆಗಳ ಇತ್ತೀಚಿನ ವಾರ್ಷಿಕ ಆಡಿಟ್ ವರದಿಗಳ ದೃಢೀಕೃತ ಪ್ರತಿ.

ಜಿ) ಶಿಕ್ಷಣ ಸಂಸ್ಥೆ/ ಟ್ರಸ್ಟ್ ಪ್ರಾರಂಭಿಸಲು ಉದ್ದೇಶಿಸಿರುವ ಪದವಿ ಪೂರ್ವ ಕಾಲೇಜಿಗೆ ನೇಮಕಾತಿ ಮಾಡಿಕೊಳ್ಳುವ ಪ್ರಾಚಾರ್ಯರ, ಉಪನ್ಯಾಸಕರ ಮತ್ತು ಬೋಧಕೇತರ ಸಿಬ್ಬಂದಿಯ ಹೆಸರು, ವಿಳಾಸ, ವಿದ್ಯಾರ್ಹತೆ ಮತ್ತು ಸೇವಾನುಭವಗಳ ವಿವರ (ವಿದ್ಯಾರ್ಹತೆಯು ಸರ್ಕಾರ ಆಯಾ ವೃಂದಕ್ಕೆ ನಿಗದಿಪಡಿಸಿದಂತೆ)

ಹೆಚ್) ಅರ್ಜಿ ಸಲ್ಲಿಸಲು ಹಾಗೂ ಇಲಾಖೆಯೊಂದಿಗೆ ವ್ಯವಹರಿಸಲು ಶಿಕ್ಷಣ ಸಂಸ್ಥೆ/ ಟ್ರಸ್ಟ್ ಸಂಸ್ಥೆಯ ಕಾರ್ಯದರ್ಶಿಗೆ ಅಧಿಕಾರ ನೀಡಲು ಕೈಗೊಂಡ ನಿರ್ಣಯದ ಪ್ರತಿ.

ಐ) ಇಲಾಖೆ/ಸರ್ಕಾರದೊಂದಿಗೆ ವ್ಯವಹರಿಸಲು ಆಡಳಿತ ಮಂಡಳಿಯು ಅಧಿಕಾರ ನೀಡಿದ ಸಂಚಾಲಕ/ ಕಾರ್ಯದರ್ಶಿಯವರ ಹೆಸರು, ಪೂರ್ಣ ಅಂಚೆ ವಿಳಾಸ, ಮೊಬೈಲ್ ಸಂಖ್ಯೆ ಹಾಗು ಇ-ಮೇಲ್ ವಿಳಾಸ. (MAX 450 Characters)

ಜೆ) ಸಂಸ್ಥೆಯ ಆಡಳಿತ ಮಂಡಳಿಯ ಇತ್ತೀಚಿನ ನವೀಕೃತ ಪ್ರತಿ. ಆಡಳಿತ ಮಂಡಳಿ ನೋಂದಣಿ ವಿವರ (ಟ್ರಸ್ಟ್/ಸಂಸ್ಥೆ)

ಕೆ) ಆಡಳಿತ ಮಂಡಳಿಯ ಹೆಸರಿನಲ್ಲಿರುವ ಸ್ವಂತ ನಿವೇಶನ/ಮೂವತ್ತು ವರ್ಷಗಳ ಅವಧಿಗೆ ಬೋಗ್ಯಕ್ಕೆ ಪಡೆದಿರುವ ದಾಖಲೆ.

ಎಲ್) ಟ್ರಸ್ಟ್ ಡೀಡ್/ ಸಂಸ್ಥೆಯ ಬೈಲಾ ಪ್ರತಿ.

9. ಶಿಕ್ಷಣ ಸಂಸ್ಥೆ/ ಟ್ರಸ್ಟ್ ಸರ್ವ ಸದಸ್ಯರ ಹೆಸರು, ತಂದೆಯ ಹೆಸರು, ವಯಸ್ಸು, ವಿದ್ಯಾರ್ಹತೆ, ವೃತ್ತಿ ವಿವರ.
10. ಕಾರ್ಯಕಾರಿ ಸಮಿತಿಯ ಸರ್ವ ಸದಸ್ಯರ ಹೆಸರು, ತಂದೆಯ ಹೆಸರು, ವಯಸ್ಸು, ವಿದ್ಯಾರ್ಹತೆ, ವೃತ್ತಿ ಮತ್ತು ಇಮೇಲ್ ವಿಳಾಸ ಸೆಕ್ಷನ್ 2(a) ನೋಡಿ.
11. ಪ್ರಾರಂಭಿಸಲು ಉದ್ದೇಶಿಸಿರುವ ಪದವಿ ಪೂರ್ವ ಕಾಲೇಜಿಗೆ ಶಿಕ್ಷಣ ಸಂಸ್ಥೆ/ ಟ್ರಸ್ಟ್ ಒದಗಿಸಿಕೊಂಡಿರುವ / ಒದಗಿಸಿಕೊಳ್ಳಬೇಕಾಗಿರುವ ಮೂಲಭೂತ ಸೌಲಭ್ಯಗಳ ವಿವರ. (If conditions mentioned as per rules 2006 rule 4 are not met The Indent Letter issued by Director Pre University Education will stand invalid after completion of period specified in Indent Letter.)

    1. ಪ್ರಾಚಾರ್ಯರ ಕೊಠಡಿ ಕನಿಷ್ಠ 250 ಚದರ ಅಡಿ. [ಇದೆ/ಇಲ್ಲ]
    2. ಕಚೇರಿ ಕೊಠಡಿ ಕನಿಷ್ಠ 250 ಚದರ ಅಡಿ. [ಇದೆ/ಇಲ್ಲ]

3. ಸಿಬ್ಬಂದಿ ಕೊಠಡಿ ಕನಿಷ್ಠ 500 ಚದರ ಅಡಿ. [ಇದೆ/ಇಲ್ಲ]
4. ವಿದ್ಯಾರ್ಥಿನಿಯರ ನಿರೀಕ್ಷಣಾ ಕೊಠಡಿ ಕನಿಷ್ಠ 500 ಚದರ ಅಡಿ ಹಾಗೂ ಸಾಕಷ್ಟು ನೀರಿನ ಸೌಲಭ್ಯದೊಂದಿಗೆ 10 ಜನರು ಬಳಸುವಂತಹ ಶೌಚಾಲಯವನ್ನು ಒಳಗೊಂಡಂತೆ. [ಇದೆ/ಇಲ್ಲ]
5. ಕನಿಷ್ಠ 10 ಬಾಲಕರು /ಬಾಲಕಿಯರು ಬಳಸುವಂತಹ ಶೌಚಾಲಯ ಸಾಕಷ್ಟು ನೀರಿನ ಸೌಲಭ್ಯದೊಂದಿಗೆ. (ಅಂಗವಿಕಲ ವಿದ್ಯಾರ್ಥಿಗಳನ್ನು ಒಳಗೊಂಡಂತೆ) [ಇದೆ/ಇಲ್ಲ]
6. ಗ್ರಂಥಾಲಯ ಮತ್ತು ವಾಚನಾಲಯ ಕೊಠಡಿ ಕನಿಷ್ಠ 1000 ಚದರ ಅಡಿ. [ಇದೆ/ಇಲ್ಲ]
7. ಕನಿಷ್ಠ 6 ಉಪನ್ಯಾಸ ಕೊಠಡಿಗಳು, ಪ್ರತಿ ಕೊಠಡಿ 450 ಚದರಡಿ 40 ವಿದ್ಯಾರ್ಥಿಗಳವರೆಗೆ (40 ವಿದ್ಯಾರ್ಥಿಗಳ ನಂತರ ಪ್ರತಿ ಒಬ್ಬ ವಿದ್ಯಾರ್ಥಿಗೆ 10 ಚದರಡಿಯಂತೆ ವಿಸ್ತೀರ್ಣ ಹೆಚ್ಚಿಸತಕ್ಕದ್ದು) [ಇದೆ/ಇಲ್ಲ]
8. ಕಾಲೇಜಿನಲ್ಲಿ ಏಕಕಾಲಕ್ಕೆ ಕನಿಷ್ಠ 100 ಬೈಸಿಕಲ್ ನಿಲುಗಡೆಗೆ ಸ್ಥಳಾವಕಾಶ. [ಇದೆ/ಇಲ್ಲ]
9. ವಿಜ್ಞಾನ ವಿಷಯಗಳು ಪ್ರಾರಂಭಿಸಲು ಇಚ್ಚಿಸದಲ್ಲಿ ಪ್ರತಿ ವಿಷಯಕ್ಕೆ ಪ್ರತ್ಯೇಕ ಪ್ರಯೋಗಾಲಯ ಕೊಠಡಿಗಳು ಕನಿಷ್ಠ ಪಕ್ಷ 800 ಚದರಡಿ ಅಳತೆ. [ಇದೆ/ಇಲ್ಲ]
10. ಎ)

11. ಉದ್ದೇಶಿತ ಕಾಲೇಜಿನ ನಿವೇಶನದ ಒಟ್ಟು ವಿಸ್ತೀರ್ಣ (ಚದರ ಅಡಿಗಳಲ್ಲಿ) (ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 709 ಪಿಜಿಸಿ 2017 ದಿನಾಂಕ: 08-03-2018 ರಂತೆ ನಿವೇಶನವನ್ನು ಈ ಕೆಳಗಿನ ವಿಸ್ತೀರ್ಣತೆ ಹೊಂದಿರತಕ್ಕದ್ದು)

| SL No | Location | Extent of land |
|---|---|---|
| I. Educational Institution imparting Pre Primary to Higher Secondary Education, or Primary to Higher Secondary Education or Pre Primary to Higher Secondary Education, | | |
| 1 | BBMP and other Municipal corporation areas | 2000 Sq meter |
| 2 | Other areas | 4000 Sq meter |
| II. Educational Institution imparting only either Primary to Higher Secondary Education, or imparting secondary and Higher Secondary Education | | |
| 3 | BBMP and other Municipal corporation areas | 1500 Sq meter |
| 4 | Other areas | 3000 Sq meter |
| III. Educational Institution imparting only Primary education or Higher Secondary Education, | | |
| 5 | BBMP and other Municipal corporation areas | 1000 Sq meter |
| 6 | Other areas | 2000 Sq meter |

ಬಿ) ಮೇಲಿನಂತೆ ಚದರ ಅಡಿಗಳ ನಿವೇಶನ. [ಇದೆ/ಇಲ್ಲ]

12. ಅರ್ಜಿ ಶುಲ್ಕ ಪಾವತಿ ವಿವರ. (ಜಮಾ ಮಾಡ ಬೇಕಾದ ಲೆಕ್ಕ ಶೀರ್ಷಿಕೆ "2202-01-102-1-06")
    1. ಚಲನ್ ಸಂಖ್ಯೆ:
    2. ಚಲನ್ ಖರೀದಿಸಿದ ದಿನಾಂಕ:
    3. ಚಲನ್ ಮೊತ್ತ:
    4. ಬ್ಯಾಂಕಿನ ಹೆಸರು ಮತ್ತು ವಿಳಾಸ:

(MAX. 450 Characters)

**ಮಾನ್ಯ ನಿರ್ದೇಶಕರ ಆದೇಶದ ಮೇರೆಗೆ**>>

ಜಂಟಿ ನಿರ್ದೇಶಕರು(ಮಾ&ಅ)(ಪ್ರ)
ಪದವಿ ಪೂರ್ವ ಶಿಕ್ಷಣ ಇಲಾಖೆ.